ಸರಬರಾಜು ಮಾಡುವ ಗೋಧಿಯ ಬೆಲೆಯನ್ನು ೧೮೫ರಿಂದ ೨೮೮ಕ್ಕೆ ಹೆಚ್ಚು ಮಾಡಿತು. ಇಲ್ಲಿ ನಾವು ಹಲ್ಲಿಂಗ್ ಮತ್ತು ಸಾಗಾಣಿಕೆ ದರವನ್ನೆಲ್ಲಾ ಲೆಕ್ಕ ಹಾಕಿ ಆದಷ್ಟೂ ಕಡಿಮೆ ಪಿರ್ಚನ್ನು ತೋರಿಸಿ ದರವನ್ನು ನಿಗದಿ ಮಾಡಿದ್ದೇವೆ. ಆದ್ದರಿಂದ ಇಲ್ಲಿ ಅಂತಹ ಹೊರೆ ಏನೂ ಇಲ್ಲ.

ಶ್ರೀ ಪಿ. ರಾಮದೇವ್.—ಇಲ್ಲಿ ದಿನಾಂಕ ೧೫-೬-೧೯೬೩ರಂದು ಸರ್ಕಾರದ ಉಗ್ರಾಣದಲ್ಲಿ ದಾಸ್ತಾನು ಇರಲಿಲ್ಲವೆಂದು ಹೇಳಿದ್ದೀರಿ. ಆದರೆ ಅದೇದಿನ ಭಾರತ ಸರ್ಕಾರದ ಎಫ್.ಸಿ.ಐ. ಗೋಡೋನ್‌ನಲ್ಲಿದ್ದ ೨೨ ಸಾವಿರ ಟನ್ ಗೋಧಿಯನ್ನು ಹಿಟ್ಟಿನ ಗಿರಣಿಗಳಿಗೆ ಹಳೆಯ ದರದಲ್ಲಿ ಕೊಟ್ಟಿದ್ದರಿಂದ ಗಿರಣಿಗಳವರು ೫೫ ಲಕ್ಷ ರೂಪಾಯಿಗಳಷ್ಟು ಲಾಭ ಪಡೆದಿದ್ದಾರೆ. ಇದನ್ನು ಕೇಂದ್ರ ಸರ್ಕಾರಕ್ಕೆ ತಾವು ಬರೆದು ಈ ಹಗರಣ ಹಾಗೂ ಈ ಮೋಸವನ್ನು ಅವರ ಗಮನಕ್ಕೆ ತರುತ್ತೀರಾ?

ಶ್ರೀ ಜಿ. ಬಸವಣ್ಣಪ್ಪ.—ಎಫ್.ಸಿ.ಐ.ನವರು ಗೋಧಿಯನ್ನು ರೋಲರ್ ಫ್ಲೋರ್ ಮಿಲ್‌ಗಳಿಗೆ ನೇರವಾಗಿ ಕೊಡುತ್ತಾರೆ. ಇದರಲ್ಲಿರುವಂತಹ ಲೋಪದೋಷಗಳು ಏನೇ ಇರಲಿ, ಬೆಲೆ ಹೆಚ್ಚಿರುವುದನ್ನು ಮಾತ್ರ ನಾವು ಕೇಂದ್ರ ಸರ್ಕಾರದ ಗಮನಕ್ಕೆ ತರುತ್ತೇವೆ. ಸಾರ್ವಜನಿಕ ವಿತರಣೆಗೆ ಕೊಟ್ಟ ಗೋಧಿಯ ಬೆಲೆ ಏರಿಕೆ ಏನಿದೆ, ಈ ಬಗ್ಗೆ ಅವರು ೨೪ ಲಕ್ಷ ರೂಪಾಯಿಗಳನ್ನು ಕೊಡಬೇಕಾಗಿದೆ. ಇದನ್ನು ನಮ್ಮ ಸರ್ಕಾರದ ಟ್ರಿಜರಿಗೆ ತುಂಬಬೇಕೆಂದು ಹೇಳಿದಾಗ ಅವರು ಹೈಕೋರ್ಟಿಗೆ ಹೋದರು. ಅವರು ಈಗ ಸ್ಟೇ ಕೊಟ್ಟಿದ್ದಾರೆ. ನಾವು ಗೌರ್ನಮೆಂಟ್ ಅಡ್ವೊಕೇಟ್ ಅವರನ್ನು ಹಾಕಿದ್ದೇವೆ. ಈ ಕೇಸ್ ಈಗ ಕೋರ್ಟಿನ ಮುಂದಿದೆ.

ಶಾಸಕರುಗಳಿಗೆ ಕನ್ನಡ ಬೆರಳಚ್ಚು ಯಂತ್ರಗಳ ಸರಬರಾಜು

೧೪೮ (೪೫೯) ಶ್ರೀ ಸುಧೀಂದ್ರರಾವ್ ಕಸಬೆ (ಕಲಮಾಲ).—ಮಾನ್ಯ ಯುವಜನ ಸೇವೆ ಹಾಗೂ ಕ್ರೀಡಾ ರಾಜ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಶಾಸಕರಿಗೆ ಕನ್ನಡದಲ್ಲಿ ತಮ್ಮ ಪತ್ರ ವ್ಯವಹಾರವನ್ನು ನಡೆಸಲು ಕನ್ನಡ ಕಿರುಬೆರಳಚ್ಚು ಯಂತ್ರವನ್ನು ಹಣ ಪಡೆದು ಒದಗಿಸುವ ಪ್ರಸ್ತಾವನೆಯೇನಾದರೂ ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದಲ್ಲಿ ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಡಾ।। ಜೀವರಾಜ ಆಳ್ವ (ಕನ್ನಡ ಮತ್ತು ಸಂಸ್ಕೃತಿ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

(ಮಾನ್ಯ ಸದಸ್ಯರು ಹಾಜರಿರಲಿಲ್ಲ)

ನಿವೃತ್ತ ಸರ್ಕಾರಿ ನೌಕರರ ನಿವೃತ್ತಿ ವೇತನವನ್ನು ಇತ್ಯರ್ಥ ಮಾಡುವುದು

೧೪೯ (೪೪೬) ಶ್ರೀ ಪಂಪಾಪತಿ (ದಾವಣಗೆರೆ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ನಿವೃತ್ತ ಸರ್ಕಾರಿ ನೌಕರರ ನಿವೃತ್ತಿ ವೇತನವನ್ನು ಎಷ್ಟು ದಿನಗಳೊಳಗಾಗಿ ಮಂಜೂರು ಮಾಡಬೇಕೆಂಬ ನಿಯಮವಿದೆ. ಹಾಗೂ ಅದನ್ನು ಸಮರ್ಪಕವಾಗಿ ಪಾಲಿಸಲಾಗುತ್ತಿದೆಯೆ?

ಆ) ೧೯೬೩ರ ಆರಂಭದಲ್ಲಿ ನಿವೃತ್ತಿ ವೇತನ ಮಂಜೂರಾಗದಿರುವ ಪ್ರಕರಣಗಳ ಸಂಖ್ಯೆ ಎಷ್ಟು ಹಾಗೂ ಸದರಿ ಸಾಲಿನಲ್ಲಿ ನಿವೃತ್ತಿ ವೇತನ ಮಂಜೂರಾತಿಯಾದ ಪ್ರಕರಣಗಳ ಸಂಖ್ಯೆ ಎಷ್ಟು?

ಇ) ೧೯೬೩ರ ಅಂತ್ಯದಲ್ಲಿ ಮಂಜೂರಾತಿ ಆಗದೆ ಉಳಿದಿರುವ ನಿವೃತ್ತಿ ವೇತನದ ಪ್ರಕರಣಗಳ ಸಂಖ್ಯೆ ಎಷ್ಟು? ಇವುಗಳಲ್ಲಿ ೩ ವರ್ಷಕ್ಕಿಂತ ಹೆಚ್ಚು ಕಾಲ ತೀರ್ಮಾನವಾಗದೆ ಉಳಿದಿರುವುವು, ೨ ವರ್ಷಕ್ಕಿಂತ ಹೆಚ್ಚಾಗಿ, ೧ ವರ್ಷಕ್ಕಿಂತ ಹೆಚ್ಚಾಗಿ, ೬ ತಿಂಗಳಿಗಿಂತ ಹೆಚ್ಚಾಗಿ ತೀರ್ಮಾನವಾಗದೇ ಉಳಿದಿರುವ ನಿವೃತ್ತಿ ವೇತನದ ಪ್ರಕರಣಗಳ ಸಂಖ್ಯೆ ಎಷ್ಟು?

ಈ) ಈ ರೀತಿ ವಿಳಂಬಕ್ಕೆ ಕಾರಣಗಳೇನು ಹಾಗೂ ಶೀಘ್ರವಾಗಿ ಮಂಜೂರು ಮಾಡಲು ಕೈಕೊಂಡ ಅಥವಾ ಕೈಕೊಳ್ಳಲಾಗುವ ಕ್ರಮಗಳೇನು?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಆ) ನಾನ್-ಗೆಜೆಟೆಡ್ ಸರ್ಕಾರಿ ನೌಕರರ ನಿವೃತ್ತಿ ವೇತನಕ್ಕೆ ಮಂಜೂರಾತಿಯು ಆವಶ್ಯವಿಲ್ಲ ಅವರು ನಿವೃತ್ತಿ ಹೊಂದಿದ ದಿನದಿಂದ ೧೫ ದಿನಗಳೊಳಗೆ ನಿವೃತ್ತಿ ವೇತನವನ್ನು ಬಿಡುಗಡೆ ಮಾಡ ಬೇಕು. ಗೆಜೆಟೆಡ್ ಸರ್ಕಾರಿ ನೌಕರರು ನಿವೃತ್ತಿ ಹೊಂದಿದ ೧೫ ದಿನಗಳೊಳಗೆ ಮಂಜೂರಾತಿ ಯಾಗದಿದ್ದಲ್ಲಿ ಮಹಾ ಲೇಖಪಾಲಕರು ಮಂಜೂರಾತಿಯಾಗಿದೆ ಎಂದು ಭಾವಿಸಿ ನಿವೃತ್ತಿ ವೇತನ ವನ್ನು ಬಿಡುಗಡೆ ಮಾಡಬೇಕು. ಸಮರ್ಪಕವಾಗಿ ಪಾಲಿಸಲಾಗುತ್ತಿದೆ.

ಆ) ಮಾಸಿಕ ವಿವರ ಪತ್ರಗಳ ವರದಿಯು ಮೇರೆಗೆ ೧೯೮೩ರ ಆರಂಭದಲ್ಲಿ ನಿವೃತ್ತಿ ವೇತನ ಮಂಜೂರಾಗದಿರುವ ಪ್ರಕರಣಗಳು ೪೫೯. ಸದರಿ ಸಾಲಿನಲ್ಲಿ ವೆಂಡಲ ೬ ತಿಂಗಳಲ್ಲಿ ನಿವೃತ್ತಿ ವೇತನ ಮಂಜೂರಾತಿಯಾದ ಪ್ರಕರಣಗಳು ೧೭, ೨೭೮ (ಪುನರ್ ವಿಮರ್ಶಿಸಿದ ಪ್ರಕರಣಗಳು ಸೇರಿ). ಉಳಿದ ೬ ತಿಂಗಳ ಮಾಹಿತಿಯನ್ನು ಶೇಖರಿಸಲಾಗುತ್ತಿದೆ.

ಇ) ದೊರಕಿರುವ ಮಾಹಿತಿಯು ಮೇರೆಗೆ ೧೯೮೩ರ ಅಂತ್ಯದಲ್ಲಿ ಮಂಜೂರಾತಿಯಾಗದೆ ಉಳಿದಿರುವ ನಿವೃತ್ತಿ ವೇತನದ ಪ್ರಕರಣಗಳು-೮೮೧

೩ ವರ್ಷಕ್ಕಿಂತ ಹೆಚ್ಚು-	೧೨೧
೨ ವರ್ಷಕ್ಕಿಂತ ಹೆಚ್ಚು-	೨೩೯
೧ ವರ್ಷಕ್ಕಿಂತ ಹೆಚ್ಚು-	೬೯
೬ ತಿಂಗಳಿಗಿಂತ ಹೆಚ್ಚು-	೩೦೮
೬ ತಿಂಗಳಿಗಿಂತ ಕಡಿಮೆ-	೧೪೪
ಒಟ್ಟು	೮೮೧

ವಿಳಂಬಕ್ಕೆ ಕಾರಣಗಳು :

೧ ಅಗತ್ಯವಾದ ದಾಖಲಾತಿಗಳು ನಿವೃತ್ತಿ ನೌಕರರಿಂದಾಗಲಿ ಅಥವಾ ನಿಧನ ಹೊಂದಿದ ನೌಕರರ ಕುಟುಂಬದವರಿಂದಾಗಲಿ ದೊರಕದಿರುವುದು.

೨ ನಿವೃತ್ತ ನೌಕರನ ಮೇಲೆ ಇಲಾಖಾ ತನಿಖೆ ನ್ಯಾಯಾಂಗ ತನಿಖೆ ಬಾಕಿ ಇರುವುದು.

೩ ಸೇವಾವಧಿಯನ್ನು ನಿಯಮಾನುಗುಣವಾಗಿಸದಿರುವುದು.

೪ ಸತ್ತ ನೌಕರನ ವಾರಸುದಾರರ ನಡುವಿನ ವಿವಾದದಿಂದಾಗಿ.

ನಿವೃತ್ತಿ ವೇತನವು ಶೀಘ್ರವಾಗಿ ಮಂಜೂರು ಮಾಡುವಂತೆ ಸರ್ಕಾರವು ವಿವರವಾದ ಸೂಚನೆ ಗಳನ್ನು ಎಲ್ಲಾ ಇಲಾಖಾ ಮುಖ್ಯಸ್ಥರಿಗೆ ಸರ್ಕಾರಿ ಆಜ್ಞೆ ಸುತ್ತೋಲೆಗಳ ಮೂಲಕ ಆಗಾಗ್ಗೆ ನೀಡ ಲಾಗುತ್ತಿದೆ. ಸೇವಾ ನಿಯಮಾವಳಿಗಳನ್ನು ಮತ್ತು ನಿವೃತ್ತಿ ವೇತನಕ್ಕೆ ಸಂಬಂಧಪಟ್ಟ ಕ್ರಮ ಗಳನ್ನು ಸರಳೀಕರಿಸಿದೆ. ಅನೇಕ ಹಂತಗಳಲ್ಲಿ ಇವುಗಳ ಪುನರ್ವಿಚಾರಣೆ ನಡೆಸುತ್ತಿರಬೇಕೆಂದು ಇಲಾಖಾ ಅಧಿಕಾರಿಗಳಿಗೆ ಆದೇಶಿಸಲಾಗಿದೆ. ಸೂಕ್ತವಿದ್ದಲ್ಲಿ ಪರಿಹಾರೋಪಾಯವನ್ನು ನೀಡುವುದು

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೆ. ಸರ್ಕಾರದ ನೌಕರರು ನಿವೃತ್ತಿ ಹೊಂದಿದ ೧೫ ದಿವಸ ಗಳೊಳಗೆ ನಿವೃತ್ತಿ ವೇತನ ವಿತರಣೆ ಮಾಡುವ ಬಗ್ಗೆ ಸರ್ಕಾರದ ಆಜ್ಞೆ ಇದೆ ಎಂದು ಹೇಳಿದ್ದಾರೆ. ಆದರೆ ಇಲ್ಲಿ ಮೂರು ವರ್ಷದಿಂದ ಆರು ತಿಂಗಳವರೆಗೆ ಬಾಕಿ ಇರತಕ್ಕಂಥ ೮೮೧ ಪ್ರಕರಣಗಳನ್ನು ತೋರಿಸಿದ್ದಾರೆ. ನಿವೃತ್ತಿ ಹೊಂದಿ ಮೂರು ವರ್ಷಗಳಾದರೂ ನಿವೃತ್ತಿ ವೇತನ ದೊರೆಯದಿರು ವುದಕ್ಕೆ ಕಾರಣಗಳೇನು? ಇದಕ್ಕೆ ಒಂದು ಉದಾಹರಣೆ ಕೊಡುವುದಾದರೆ, ಸಹಾಯಕ ಕೃಷಿ ಅಧಿಕಾರಿ ಯಾಗಿ ಕೆಲಸ ಮಾಡುತ್ತಿದ್ದ ಶ್ರೀ ಎಸ್. ದೇವಪ್ಪನವರು ತಾ। ೩೦-೬-೮೦ರಲ್ಲಿ ನಿವೃತ್ತಿ ಹೊಂದಿದರು. ಆದರೆ ಇವರಿಗೆ ಇನ್ನೂ ನಿವೃತ್ತಿ ವೇತನ ಸಿಕ್ಕಿಲ್ಲ. ಇಂತಹ ಅಧಿಕಾರಿಗೆ ಈ ಗತಿ ಯಾದರೆ ಇನ್ನೂ ಸಾಮಾನ್ಯ ಒಬ್ಬ ಜವಾನನ ಗತಿ ಏನಾಗಿರಬಹುದು. ಈಗ ಇವರಿಗೆ ಕೆಲಸವೂ ಇಲ್ಲ ನಿವೃತ್ತಿ ವೇತನವೂ ಇಲ್ಲ ಎಂದರೆ ಅವರ ಜೀವನ ಹೇಗೆ ನಡೆಸಬೇಕು. ಇದಕ್ಕೆ ಸಂಬಂಧಪಟ್ಟ ಅರ್ಜಿ ಯನ್ನು ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಕಳಿಸಿಕೊಡುತ್ತೇನೆ. ಇವರಿಗೆ ಆದಷ್ಟು ಜಾಗ್ರತೆ

ನಿವೃತ್ತಿ ಸಿಗುವಂತೆ ವ್ಯವಸ್ಥೆ ಮಾಡಬೇಕು ಮತ್ತು ಇನ್ನುಳಿದ ೮೮೧ ಪ್ರಕರಣಗಳಲ್ಲಿ ಇನ್ನು ೧೫ ದಿವಸದೊಳಗಾಗಿ ನಿವೃತ್ತಿ ವೇತನ ಸಂಬಂಧಪಟ್ಟವರಿಗೆ ಸಿಗುವಂತೆ ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ನಿವೃತ್ತಿ ವೇತನ ಆದಷ್ಟು ಜಾಗ್ರತೆ ಸಿಗಬೆಕೆಂಬುದೇ ಸರ್ಕಾರದ ಉದ್ದೇಶ ಮತ್ತು ಧೋರಣೆಯಾಗಿದೆ. ಇಲ್ಲಿ ಮೂರು ವರ್ಷದಿಂದ ಕೆಲವು ಪ್ರಕರಣಗಳು ಬಾಕಿ ಇರುವುದಕ್ಕೆ ಕಾರಣಗಳೇನು ಎಂಬುದನ್ನು ವಿವರಿಸಿದ್ದೇನೆ. ಇಲ್ಲಿ ಸುಮಾರು ೨೦೦ ಪ್ರಕರಣಗಳಿಗೆ ಸಂಬಂಧಪಟ್ಟಂತೆ ನಿವೃತ್ತಿ ಹೊಂದಿದವರಿಂದ ಇಲ್ಲಿವೇ ಅವರ ಕುಟುಂಬದವರಿಂದ ನಮಗೆ ಸರಿಯಾದ ದಾಖಲಾತಿಗಳು ದೊರಕಿಲ್ಲ. ಅವರುಗಳು ಸಂಬಂದಪಟ್ಟ ದಾಖಲಾತಿಗಳನ್ನು ಕೊಟ್ಟರೆ ನಾವು ಕೂಡಲೇ ಕ್ರಮ ಕೈಗೊಳ್ಳುತ್ತೇವೆ. ೨೫ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಬೇರೆ ಬೇರೆ ಇಲಾಖಾ ತನಿಖೆ ಇಲ್ಲವೇ ನ್ಯಾಯಾಂಗ ತನಿಖೆ ನಡೆಯುತ್ತಿರುವುದರಿಂದ ನಾವು ನಿವೃತ್ತಿ ವೇತನ ಕೊಟ್ಟು ಪುನೆಗೆ ಕಳುಹಿಸುವುದಕ್ಕಾಗುವುದಿಲ್ಲ. ೬೦೨ ಪ್ರಕರಣಗಳಲ್ಲಿ ಅವರ ಸೇವಾ ಅವಧಿ ನಿಯಮಕ್ಕನುಗುಣವಾಗಿಲ್ಲದೆ ಇರುವುದು ಒಂದು ಕಾರಣವಾಗಿದೆ. ಇನ್ನು ಸುಮಾರು ೫೪ ಕೇಸ್‌ಗಳಲ್ಲಿ ಮೃತರ ವಾರಸುದಾರರು ಯಾರು ಎನ್ನುವ ಮಾಹಿತಿ ಬೇಕು ನಮಗೆ ಬರಬೇಕು, ನಮಗೆ ಬರಬೇಕು ಎನ್ನುವ ಜಗಳದಿಂದ ಇದು ತೀರ್ಮಾನವಾಗಿಲ್ಲ. ಈ ೫೪ ಕೇಸುಗಳು ಕೋರ್ಟಿನಲ್ಲಿ ಇತ್ಯರ್ಥವಾಗಿ ಬರುವ ತನಕ ನಾವು ಏನೂ ಮಾಡುವುದಕ್ಕೆ ಆಗುವುದಿಲ್ಲ. ಮತ್ತೆ ಮಾನ್ಯ ಸದಸ್ಯರು ಈ ಒಂದು ವಿಚಾರವನ್ನು ಎತ್ತಿದ್ದಾರೆ. ಆ ಬಗ್ಗೆ ಸರಿಯಾದ ಮಾಹಿತಿಯನ್ನು ಕಳುಹಿಸಿಕೊಟ್ಟರೆ ಅದನ್ನು ನಾನು ಪರಿಶೀಲಿಸಿ ಅವರಿಗೆ ತಿಳಿಸುತ್ತೇನೆ.

ಮಡಕೇರಿಯಲ್ಲಿರುವ ಜಿಲ್ಲಾ ಮಂಖ್ಯ ಆಸ್ಪತ್ರೆಗೆ ವಿದ್ಯುತ್ ಉತ್ಪಾದಕ ಯಂತ್ರ ವನ್ನೊದಗಿಸುವುದು

೧೫೦ (ಳಲ೨) ಶ್ರೀ ಎಂ. ಎಂ. ನಾಣಯ್ಯ (ಮಡಕೇರಿ).—ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಮಡಕೇರಿ ಜಿಲ್ಲಾ ಕೇಂದ್ರ ಆಸ್ಪತ್ರೆಯಲ್ಲಿ ವಿದ್ಯುಚ್ಛಕ್ತಿಯ ಅಡಚಣೆಯಿಂದಾಗಿ ಶಸ್ತ್ರ ಚಿಕಿತ್ಸಾಗಾರದಲ್ಲಿ ಚಿಕಿತ್ಸೆ ಮತ್ತು ಶಸ್ತ್ರ ಚಿಕಿತ್ಸೆ ಮಾಡುವ ಸಂದರ್ಭಗಳಲ್ಲಿ ರೋಗಿಗಳಿಗೆ ಅನಾನುಕೂಲ ವುಂಟಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ಸರ್ಕಾರವು ಈ ವಿಚಾರದಲ್ಲಿ ಯಾವ ಕ್ರಮವನ್ನು ಕೈಗೊಳ್ಳಲು ಉದ್ದೇಶಿಸಿದೆ?

ಇ) ಮಡಕೆ ರಿಯಲ್ಲಿರುವ ಜಿಲ್ಲಾ ಕೇಂದ್ರ ಆಸ್ಪತ್ರೆಗೆ ವಿದ್ಯುಚ್ಛಕ್ತಿ ಜನಕ ಯಂತ್ರವನ್ನು ಒದಗಿಸುವ ಉದ್ದೇಶವೆ ನಾದರೂ ಇದೆಯೆ ಇದ್ದರೇ ಯಾವಾಗ ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವರು).—

ಅ) ಹೌದು

ಆ) ಮತ್ತು ಇ ಈ ಆಸ್ಪತ್ರೆಗೆ ಒಂದು ವಿದ್ಯುತ್‌ಜನಕವನ್ನು ಒದಗಿಸುವ ಉದ್ದೇಶವು ಸರ್ಕಾರಕ್ಕಿದೆ.

ಶ್ರೀ ಎಂ. ಎಂ. ನಾಣಯ್ಯ.—ಮಾನ್ಯ ಅಧ್ಯಕ್ಷರೇ ಈ ಆಸ್ಪತ್ರೆಗೆ ವಿದ್ಯುತ್‌ಜನಕನ್ನು ಯಾವಾಗ ಸ್ಥಾಪನೆ ಮಾಡುತ್ತಾರೆ, ಅಥವಾ ಇಲ್ಲವೆ ಎಂಬುದನ್ನು ತಿಳಿಸಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯಾ.—ಮಾನ್ಯ ಅಧ್ಯಕ್ಷರೇ ಜಿಲ್ಲಾ ಮಟ್ಟದ ಅನೇಕ ಆಸ್ಪತ್ರೆಗಳಲ್ಲಿ ಈ ವಿದ್ಯುತ್ ಜನಕವನ್ನು ಸ್ಥಾಪನೆ ಮಾಡದೆ ಇರುವುದರಿಂದ ಬಹಳ ತೊಂದರೆಯಾಗಿದೆ. ಈ ವಿಷಯ ಸರ್ಕಾರದ ಗಮನಕ್ಕೂ ಕೂಡ ಬಂದಿದೆ. ಇವತ್ತು ನಾವು ಅನೇಕ ಸಬ್‌ಡಿವಿಜನ್‌ಗಳಲ್ಲಿ ಕೂಡ ಈ ವಿದ್ಯುತ್ ಜನಕವನ್ನು ಕೊಡಬೇಕೆಂದು ಹೇಳಿ ಬಿಜಾಪುರ, ಕೋಲಾರ, ಮತ್ತು ಬಿದರ್‌ಗಳಲ್ಲಿ ಸ್ಥಾಪನೆ ಮಾಡಬೇಕೆಂದು ಹಣವನ್ನು ಕೊಟ್ಟಿದ್ದೇವೆ. ಅಲ್ಲಿ ಈ ವರ್ಷ ಸ್ಥಾಪನೆ ಮಾಡುತ್ತೇವೆ. ಮತ್ತೆ ಕೊಡಗು ಜಿಲ್ಲೆಗೂ ಕೂಡ ೧೯೮೪-೮೫ನೇ ಸಾಲಿನಲ್ಲಿ ಸ್ಥಾಪನೆ ಮಾಡಲಿಕ್ಕೆ ಸೂಕ್ತ ಕಾರ್ಯ ಕ್ರಮ ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತೇವೆ.